ಮೊತ್ತಮೊದಲ ಕಚ್ಚಾ ವಸ್ತುವಾಯಿತು. ಇದು ವಿದ್ಯುತ್ ವೈರ್‌ಗಳನ್ನು ಒಳಗೊಂಡಂತೆ ಹಲವಾರು ಉದ್ಯಮ ಕ್ಷೇತ್ರಗಳನ್ನೂ ಪ್ರವೇಶಿಸಿತು.

ಪ್ಲಾಸ್ಟಿಕ್ ಎಂಬ ಈ ಮೋಹಕ ವಸ್ತುವಿಗೆ ದೊಡ್ಡದೊಂದು ಬದಲಾವಣೆ ದೊರೆತದ್ದು 1907 ರಲ್ಲಿ ಅಮೆರಿಕಾದ ಲಿಯೋ ಬೇಕಲ್ಯಾಂಡ್ ಎಂಬಾತ ಬೇಕಲೈಟ್ ಎಂಬ ವಸ್ತುವನ್ನು ಕಂಡು ಹಿಡಿದಾಗ! ಇದು ಈಗ ನೀವು ನೋಡುತ್ತಿರುವ ಆಧುನಿಕ ಪ್ಲಾಸ್ಟಿಕ್ಕಿನ ಹುಟ್ಟಿಗೆ ಕಾರಣವಾಯಿತು ಎಂದೇ ಹೇಳಬಹುದು. ಪಳೆಯುಳಿಕೆ ಇಂಧನಗಳಿಂದ ತಯಾರಾದ ಮೊಟ್ಟಮೊದಲ ಪ್ಲಾಸ್ಟಿಕ್ ಅದು. ಬೇಕಲ್ಯಾಂಡ್ ಕೋಲ್ ಟಾರ್ ನಿಂದ ಉತ್ಪತ್ತಿಯಾದ ಫಿನಾಲ್‌ಅನ್ನು ಇದಕ್ಕೆ ಬಳಸಿದ್ದ.

ಇದಾದ ನಂತರ 1929 ರಲ್ಲಿ ಪಾಲಿಯಸ್ಟ್ ರೀನ್ ಮತ್ತು 1930 ರಲ್ಲಿ ಪಾಲಿಯಸ್ಟರ್ ತಯಾರಾದವು. 1933ರಲ್ಲಿ ಪಾಲಿವಿನೈಲ್ ಕ್ಲೋರೈಡ್ (ಪಿ.ವಿ.ಸಿ) ಮತ್ತು ಪಾಲಿಥೀನ್ ಗಳು ಬಂದವು. 1935ರಲ್ಲಿ ನೈಲಾನ್ ತಯಾರಾಯಿತು. ಇವು ಬಹಳ ಬೇಗನೇ ಜಗತ್ತಿನ ಎಲ್ಲ ಭಾಗಗಳಲ್ಲಿ ಜನಪ್ರಿಯವಾದವು. ಬಳಕೆಗೆ ಹಿತಕರ ಹಾಗೂ ನೋಡಲು ರಮ್ಯವಾಗಿದ್ದ ಇವು ಫ್ಯಾಷನ್ ಜಗತ್ತಿನಲ್ಲಿ ಕಾಲಿಟ್ಟವು. 1930ರ ಹೊತ್ತಿಗೆ ಬಿಳಿಯ ಮತ್ತು ಹೊಳಪಿನ ತಿಳಿ ಬಣ್ಣದ ಪ್ಲಾಸ್ಟಿಕ್‌ಗಳು ವಿವಿಧ ರೂಪಗಳಲ್ಲಿ ಮಾರುಕಟ್ಟೆಯನ್ನು ಪ್ರವೇಶಿಸಿದವು.

ಆದರೆ ನಿಜವಾಗಿಯೂ ಪ್ಲಾಸ್ಟಿಕ್ ಉದ್ದಿಮೆಯು ದೈತ್ಯ ಉದ್ಯಮವಾಗಿ ಬೆಳೆದದ್ದು ಯುದ್ಧ ರಂಗವನ್ನು ಪ್ರವೇಶಿಸಿದಾಗ. ಮಿಲಿಟರಿ ವಾಹನಗಳಿಂದ ತೊಡಗಿ ರಾಡಾರ್‌ಗಳವರೆಗೆ ಪ್ಲಾಸ್ಟಿಕ್‌ನ ಬಳಕೆಯಾಯಿತು. ಪೆಟ್ರೋ ಕೆಮಿಕಲ್ ಕಂಪನಿಗಳು ಕಚ್ಚಾ ತೈಲವನ್ನು ಲಾರಿಗಳಲ್ಲಿ ಸಾಗಿಸಿ ಪ್ಲಾಸ್ಟಿಕ್ಕನ್ನು ತಯಾರಿಸಿದವು. ಅದಕ್ಕಾಗಿ ಹೊಸ ಘಟಕಗಳನ್ನು ಸ್ಥಾಪಿಸಿದವು. 1945ರಲ್ಲಿ ಎರಡನೇ ಮಹಾಯುದ್ಧ ಕೊನೆಗೊಂಡ ವೇಳೆಗೆ ಪ್ಲಾಸ್ಟಿಕ್ ದೈತ್ಯ ಉದ್ಯಮವಾಗಿ ಬೆಳೆದು ನಿಂತಿತ್ತು.

ಅಡುಗೆಮನೆಗೂ ಪ್ಲಾಸ್ಟಿಕ್ ನುಗ್ಗಿ ಜನಪ್ರಿಯವಾಗಿದ್ದು 1948ರಲ್ಲಿ 'ಟಪ್ಪರ್ ವೇರ್' ಮೂಲಕ. 1941ರಲ್ಲೇ ಬಂದಿದ್ದ ಪಾಲಿಥೀನ್ ಟೆಫ್ಥಲೇಟ್ (ಪೆಟ್) ಆ ಹೊತ್ತಿಗಾಗಲೇ ಅಂತಹದ್ದೇ ಹೆಜ್ಜೆಯನ್ನಿಟ್ಟಿತ್ತು.

## ಪ್ಲಾಸ್ಟಿಕ್ ಬಗ್ಗೆ ನಿಮಗೆಷ್ಟು ಗೊತ್ತಿದೆ?

- ಪ್ರತಿ ವರ್ಷ ಜಗತ್ತಿನಲ್ಲಿ ನಾವು 5000 ಶತಕೋಟಿ ಪ್ಲಾಸ್ಟಿಕ್ ಚೀಲಗಳನ್ನು ಬಳಸುತ್ತೇವೆ.
- ನಿಮಿಷವೊಂದಕ್ಕೆ ಸರಾಸರಿ ಒಂದು ಟ್ರಕ್ ನಷ್ಟು ಪ್ಲಾಸ್ಟಿಕ್ ಕಸ ಸಾಗರಗಳನ್ನು ಸೇರುತ್ತಿದೆ.
- ಕಳೆದ ಒಂದು ದಶಕದಲ್ಲಿ ಕಳೆದ ಒಂದು ಶತಮಾನಕ್ಕಿಂತ ಹೆಚ್ಚಿನ ಪ್ಲಾಸ್ಟಿಕ್ ಅನ್ನು ಉತ್ಪಾದಿಸಿದ್ದೇವೆ.
- ನಾವು ಬಳಸುವ ಪ್ಲಾಸ್ಟಿಕ್‌ನಲ್ಲಿ ಬಹುದೊಡ್ಡ ಪಾಲು, ಒಂದು ಬಾರಿ ಬಳಸಿ ಬಿಸಾಡುವ ವಸ್ತುಗಳದ್ದಾಗಿದೆ.
- ಪ್ರತಿ ನಿಮಿಷಕ್ಕೆ ನಾವು ಸರಾಸರಿ ಹತ್ತು ಲಕ್ಷ ಪ್ಲಾಸ್ಟಿಕ್ ಬಾಟಲಿಗಳನ್ನು ಖರೀದಿಸುತ್ತೇವೆ.
- ನಾವು ಉತ್ಪಾದಿಸುವ ಕಸದಲ್ಲಿ ಶೇಕಡಾ 10ರಷ್ಟು ಪ್ಲಾಸ್ಟಿಕ್ ಕಸವಾಗಿದೆ.

ಮಗುವಿನ ಹಾಲಿನ ಬಾಟಲಿಯಿಂದ ತೊಡಗಿ ಹೂಗಳನ್ನು ಸುತ್ತುವ ಪ್ಲಾಸ್ಟಿಕ್ಕಿನವರೆಗೆ ಎಲ್ಲವೂ ಒಂದೇ ವಸ್ತುವೇ. ಪಾಲಿಮರ್‌ಗೆ ಸೇರಿಸುವ ಇಂಗಾಲದ ಅಣುಗಳು ಅದರ ನಮ್ಯತೆಯನ್ನು ಬದಲಿಸುತ್ತಾ ಹೋದವು. ಹಾಗಾದಂತೆ ಅವುಗಳ ಉಪಯೋಗವೂ ಹೆಚ್ಚಿತು. ವೈದ್ಯಕೀಯ ಕ್ಷೇತ್ರದಿಂದ ಅಡುಗೆಯ ಮನೆಯವರೆಗೆ ಪ್ಲಾಸ್ಟಿಕ್ ಅನಿವಾರ್ಯ ಎನ್ನುವಷ್ಟರ ಮಟ್ಟಿಗೆ ನಮ್ಮ ಜೀವನದಲ್ಲಿ ಅದು ಹಾಸು ಹೊಕ್ಕಾಯಿತು.

### ಅಪಾಯದ ಅರಿವು

ಈ ಶತಮಾನದ ಆರಂಭದಲ್ಲೇ ಅಪಾಯದ ಅರಿವು ನಿಧಾನಕ್ಕೆ ಗೋಚರಿಸತೊಡಗಿತ್ತು. ಒಂದು ಬಾರಿಯ ಬಳಕೆಗೆ ಮಾತ್ರ ತಯಾರಿಸಿದ

